ಸಾಕ್ಷಿಯನ್ನು 17.08.2023 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 1 ,3 , 4 ಪರ ವಕೀಲರಿಂದಃ

1. ದಾವಾ ಸ್ವತ್ತು ಐಟಂ ನಂ 3 ರಲ್ಲಿ ಎಷ್ಟು ವಿಸ್ತೀರ್ಣ ಇದೆ ನನಗೆ ಗೊತ್ತಿಲ್ಲ. ಸರ್ವೆ ನಂ 274 ರಲ್ಲಿ ಒಟ್ಟು 1 ಎಕರೆ 19 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ಮೊದಲಿಗೆ ನನ್ನ ಮಾವ ಚೊಂಗನಚೌಡೆಗೌಡ ಎಂದರೆ 2 ನೆ ಪ್ರತಿವಾದಿರವರ ಹೆಸರಿನಲ್ಲಿ ಇತ್ತು ನಂತರ ಪ್ರತಿವಾದಿ 1 , 2 ಎ ಹಾಗೂ 3 ರವರು ಹಂಚಿಕೊಂಡಿರುತ್ತೇವೆ. ನಾವುಗಳು ದಿಃ 21.3.2007 ರಲ್ಲಿ ವಿಭಾಗಪತ್ರದ ಮೂಲಕ ಸದರಿ ಸ್ವತ್ತನ್ನು ಹಂಚಿಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರುತ್ತದೆ ಬರೆಯಲು ಬರುವುದಿಲ್ಲ.

2. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ದಿಃ 21.02.2007 ರ ನೊಂದಾಯಿತ ಪಾಲುಪಟ್ಟಿಯ ವಿಭಾಗಪತ್ರ ಆಗಿದ್ದು ಅದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿರುವುದರಿಂದ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ನಿಡಿ 1 ರಲ್ಲಿ ನನ್ನ ಯಜಮಾನರಿಗೆ , ನನ್ನ ಭಾವ ಮತ್ತು ಮೈದುನನಿಗೆ ಯಾವೆಲ್ಲ ಸ್ವತ್ತುಗಳನ್ನು ಭಾಗಕೊಟ್ಟಿದ್ದಾರೆ ಎಂದು ಬರೆಯಲಾಗಿರುತ್ತದೆ ಎಂದರೆ ಸುಳ್ಳು. ಸಾಕ್ಷಿ ಸ್ವತಃ 19 1/2 ಗುಂಟೆ ಜಮೀನನ್ನು ಮಾತ್ರಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಆ ಪ್ರಕಾರವಾಗಿ ವಿಭಾಗಪತ್ರದಲ್ಲಿ ಬರೆಸಿರುವುದು ಸರಿ ಇದೆಯಾ ಇಲ್ಲವ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದ ದೃಢಿಕೃತ ಪ್ರತಿವನ್ನು ಈಗಾಗಲೆ ನಾನು ನಿ ಪಿ 5 ಎಂದು ಹಾಜರುಪಡಿಸಿರುತ್ತೇನೆ. ಸದರಿ ವಿಭಾಗಪತ್ರದಲ್ಲಿ ಯಾರು ಯಾರು ಸಹಿ ಪೂಡಿದ್ದಾರೆ ಯವ ಯಾವ ಆಸ್ತಿ ಯಾರಿಗೆ ಕೊಟ್ಟಿದ್ದಾರೆ ನಾನು ನೋಡಿರುವುದಿಲ್ಲ. ಸದರಿ ವಿಭಾಗಪತ್ರವನ್ನು ನನ್ನ ಭಾವ ನಾಗೆಗೌಡರವರು ಕೊಟ್ಟಿರುವುದರಿಂದ ಅದರಲ್ಲಿ ಏನೇನು ಬರೆದಿದೆ ಯಾರು ಸಹಿ ಮಾಡಿದ್ದಾರೆಂದು ನಾನು ನೋಡಿರುವುದಿಲ್ಲ. ಸದರಿ ವಿಭಾಗಪತ್ರದ ಬಗ್ಗೆ ನಮ್ಮ ವಕೀಲರ ಬಳಿ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗಪತ್ರದಲ್ಲಿ ನಾಗೆಗೌಡನಿಗೆ 3 ಐಟಂ ಸ್ವತ್ತುಗಳನ್ನು ನಮಗೆ 2 ಐಟಂ ಸ್ವತ್ತು ಕೊಟ್ಟಿರುತ್ತಾರೆ.

3. ನಾಗೆಗೌಡರಿಗೆ ಮೊದಲನೆ ಐಟಂ ಆಗಿ ಸರ್ವೆ ನಂ 138/3 ರಲ್ಲಿ 6 ಗುಂಟೆ ಜಮೀನನ್ನು ಕೊಟ್ಟಿರುತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೆಯದಾಗಿ ಸರ್ವೆ ನಂ 94/1 ರಲ್ಲಿ 20 ಗುಂಟೆ ಜಮೀನನ್ನು ಕೊಟ್ಟಿದ್ದಾರೆ ಹಾಗೂ ಸರ್ವೆ ನಂ 274 ರಲ್ಲಿ 19 1/2

ಗುಂಟೆ ಜಮೀನನ್ನು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಯಜಮಾನರಿಗೆ ನಿಡಿ 1 ರ ಪ್ರಕಾರ ಸರ್ವೆ ನಂ 274 ರಲ್ಲಿ 19 1/2 ಗುಂಟೆ ಕೊಟ್ಟಿರುತಾರೆ ಎಂದರೆ ಸರಿ. ಹಾಗೆ 17 ಗುರೆಟ ಜಮೀನನ್ನು ನನ್ನಯಜಮಾನರಿಗೆ ಕೊಟ್ಟಿರುತ್ತಾರೆ. ಅದರ ಸರ್ವೆ ನಂ ಗೊತ್ತಿರುವುದಿಲ್ಲ. 3 ನೆ ಪ್ರತಿವಾದಿಗೆ ಸರ್ವೆ ನಂ 274 ರಲ್ಲಿ 20 ಗುಂಟೆ ಜಮೀನು,ಕೊಟ್ಟಿದ್ದಾರೆ ಎಂದರೆ ಸರಿ. ಸರ್ವೆ ನಂ 41/3 ರಲ್ಲಿ 19 ಗುಂಟೆ ಜಮೀನು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಮಾವ 2 ನೆ ಪ್ರತಿವಾದಿಗೆ ನಿಡಿ 1 ರ ಪ್ರಕಾರ ಸರ್ವೆ ನಂ 146/5 ರಲ್ಲಿ 19 ಗುಂಟೆ 298/4 ರಲ್ಲಿ 12 ಗುಂಟೆ, 299/7 ರಲ್ಲಿ 11 ಗುಂಟೆ ರಂತೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿರುವ 3 ಭಾಗಗಳ ಬಗ್ಗೆ ನಮ್ಮ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುತ್ತೇನೆ. 4 ನೆ ಪ್ರತಿವಾದಿಗೆ ನಿಡಿ 1 ರಲ್ಲಿ ಯಾವ ಸ್ವತನ್ನು ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ಅವರಿಗೆಕ್ರಯಕ್ಕೆ ಕೊಟ್ಟಿರು ಜಮೀನು 17 ಗುಂಟೆ ಅದು ಸರ್ವೆ ನಂ4/1 ಬಿ ಚಿಮ್ಮಿ ಗ್ರಾಮಕ್ಕೆ ಸೇರಿರುವ ಜಮೀನು ಎಂದರೆ ಸರಿ. ಈ ವಿಚಾರವಾಗಿ ವಿಭಾಗ ಪತ್ರದಲ್ಲಿ ಏನು ಬರೆದಿದೆ ನಮ್ಮ ವಕೀಲರ ಮೂಲಕ ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ವಿಭಾಗಪತ್ರದಂತೆ ಎಲ್ಲರಿಗು ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗಪತ್ರದಂತೆ ನನಗೆ ಮತ್ತು ಪ್ರತಿವಾದಿಗಳಿಗೆ ಖಾತೆಯಾಗಿ ಆರ್ ಟಿ ಸಿ ಬಂದಿರುತ್ತದೆ ಎಂದರೆ ಸಾಕ್ಷಿ ಅದು ಮೋಸದಿಂದ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಯಜಮಾನರಿಗೆ ಮೊಸದಿಂದ ಖಾತೆಯಾಗಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಯಜಮಾನರ ಹೆಸರಿನಲ್ಲಿರುವ ಆರಿ ಟಿ ಸಿ ಗಳನ್ನು ನನ್ನ ಭಾವ ತೆಗೆದುಕೊಟ್ಟಿರುತ್ತಾರೆ. ದಾವ ಸ್ವತ್ತು ಐಟಂ ನಂ.3 ನನ್ನ ಯಜಮಾನರ ಹೆಸರಿಗೆ ಆರ್ ಟಿ ಸಿ ಬಂದಿರುತ್ತದೆ ಎಂದರೆ ಸರಿ. ಪ್ರಸ್ತುತ ಸದರ ದಾವ ಸ್ವತ್ತು ಐಟಂ ನಂ 3 ನನ್ನಹೆಸರಿನಲ್ಲಿ ಇದೆ.

4. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಸರ್ವೆ ನಂ 274/7 ರಆರಿ ಟಿ ಸಿ ಯಾಗಿದ್ದು ಸದರಿ ಆರ್ ಟಿ ಸಿ ಶೈಲಜ ಎಂದರೆ ನನ್ನ ಹೆಸರಿನಲ್ಲಿ ಮತ್ತುಮೇಘನ ಎಂದರೆ ನನ್ನ ಮಗಳ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇದೆ ಆದರೆ ನ್ನನ್ನ ಮಗಳ ಹೆಸರಿನಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ತಮ್ಮ ಹೆಸರು ಇರುವುದನ್ನು ಒಪ್ಪಿಕೊಂಡಿರುವುದರಿಂದ ಸದರಿ ಪಹಿಣಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ಸದರಿ ಸ್ವತನ್ನು ನನ್ನ ಜೀವನಾಂಶಕ್ಕೆ ಕೊಟ್ಟಿರುತ್ತಾರ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆ ತೊರೀಸಲಾಗಿ ಅದು ಸರ್ವೆ ನಂ274/7 ಕ್ಕೆ ಸಂಬಂಧಪಟ್ಟಂತೆ ಮ್ಯುಟೇಶನ್ ರಿಜಿಸ್ಟರಾಗಿದ್ದು ಸಾಕ್ಷಿ

ನೋಡಿ ಒಪ್ಪಿಕೊಂಡಿರುವುದರಿಂದ ನಿಡಿ 3 ಎಂದು ಗುರುತಿಸಲಾಯಿತು. ನನ್ನ ಹೆಸರಿಗೆ ಖಾತೆ ಆಗುವ ಮೊದಲು ನನ್ನ ಗಂಡನ ಹೆಸರಿನಲ್ಲಿ ಇತ್ತು. ಸಾಕ್ಷಿಗೆ ಇನ್ನೊಂದು ದಾಖಲೆ ತೋರೀಸಲಾಗಿ ಅದರಲ್ಲಿ ತನ್ನ ಗಂಡನ ಹೆಸರು ಇರುವುದಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿರುವುದರಿಂದ ನಿಡಿ 4 ಎಂದು ಗುರುತಿಸಲಾಯಿತು. ನನಗೆ ಜೀವನಾಂಶಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಆದೇಶ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ಜೀವನಾಂಶದ ಬಗ್ಗೆ ಯವುದೆ ದಾಖಲೆಗಳನುನ ಹಾಜರುಪಡಿಸದೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ